# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 457 |
| 2 | ಸದಸ್ಯರ ಹೆಸರು | : | ಡಾ॥ ಕೆ.ಗೋವಿಂದರಾಜ್,<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 15-09-2022 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರಿನಲ್ಲಿ ಇತ್ತೀಚೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಸದ ಲಾರಿಗಳಿಂದ ಅಪಘಾತಗಳು ಸಂಭವಿಸುತ್ತಿದ್ದು, ನಾಗರಿಕರು ಪ್ರಾಣ ಕಳೆದು ಕೊಳ್ಳುತ್ತಿರುವುದಕ್ಕೆ ಕಾರಣಗಳೇನು; | ಬಿಬಿಎಂಪಿ ವ್ಯಾಪ್ತಿಯಲ್ಲಿ ಬಿಬಿಎಂಪಿ ಮಾಲೀಕತ್ವದ ಕಾಂಪ್ಯಾಕ್ಟರ್ ವಾಹನಗಳು ಹಾಗೂ ಗುತ್ತಿಗೆದಾರರ ಕಸದ ಕಾಂಪ್ಯಾಕ್ಟರ್ ಲಾರಿಗಳು ಕಾರ್ಯನಿರ್ವಹಿಸುತ್ತಿವೆ. ಬಿಬಿಎಂಪಿ ಮಾಲೀಕತ್ವದ ಕಾಂಪ್ಯಾಕ್ಟರ್ ವಾಹನಗಳಿಂದ ಯಾವುದೇ ಅಪಘಾತಗಳು ಉಂಟಾಗಿರುವುದಿಲ್ಲ.<br><br>ಗುತ್ತಿಗೆದಾರರ ಕಸದ ಕಾಂಪ್ಯಾಕ್ಟರ್ ಲಾರಿಗಳು ಅಪಘಾತವಾಗಿರುವ ಬಗ್ಗೆ ಪ್ರಕರಣಗಳು ದಾಖಲಾಗಿದ್ದು, ಅಪಘಾತದ ಕಾರಣಗಳನ್ನು ಗುರುತಿಸಲು ಪ್ರಾದೇಶಿಕ ಸಾರಿಗೆ ಇಲಾಖೆ (RTO) / ಪೊಲೀಸ್ ಇಲಾಖೆಗಳ ವತಿಯಿಂದ ಮೊಕದ್ದಮೆಗಳನ್ನು ದಾಖಲಿಸಿಕೊಳ್ಳಲಾಗಿದ್ದು, ಸದರಿ ಇಲಾಖೆಗಳು ತನಿಖೆಯನ್ನು ನಡೆಸುತ್ತವೆ. |
| ಆ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಸದ ಲಾರಿಗಳು ಸುಸ್ಥಿತಿಯಲ್ಲಿವೆಯೇ; ಅವುಗಳಿಗೆ ಸದೃಢತಾ ಪ್ರಮಾಣ ಪತ್ರ ಇವೆಯೇ; ಈ ಲಾರಿಗಳ ಚಾಲಕರ ಬಳಿ ಚಾಲನಾ ಪರವಾನಗಿ ಇದೆಯೇ; ಚಾಲಕರು ಅನುಭವಿಸ್ಥರಾಗಿದ್ದಾರೆಯೇ;<br>ಅಪಘಾತಗಳಾಗುವುದಕ್ಕೆ ಚಾಲಕರ ನಿರ್ಲಕ್ಷವೇ ಕಾರಣವಾದಲ್ಲಿ, ಅವರಿಗೆ ಸೂಕ್ತ ತರಬೇತಿ ನೀಡಲಾಗಿದೆಯೆ? (ವಿವರ ನೀಡುವುದು) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಸದ ಲಾರಿಗಳು ಸುಸ್ಥಿತಿಯಲ್ಲಿದ್ದು, ಚಾಲಕರ ವಾಹನ ಚಾಲನಾ ಪರವಾನಗಿ, ವಾಹನ ಚಲಿಸಲು ದೈಹಿಕ ಸಧೃಡತೆಯ ಪ್ರಮಾಣ ಪತ್ರ, ವಾಹನದ ಫಿಟ್‌ನೆಸ್ ಪ್ರಮಾಣ ಪತ್ರ, ಇನ್ಸುರೆನ್ಸ್ ಪ್ರಮಾಣ ಪತ್ರಗಳ ತಪಾಸಣೆ ಮಾಡಲು ವಲಯಗಳ ಹಂತದಲ್ಲಿ ಉಸ್ತುವಾರಿ ಮಾಡಲು ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಇವರು ತಪಾಸಣೆ ನಡೆಸುತ್ತಾರೆ.<br><br>ಆಟೋಟಿಪ್ಪರ್‌ಗಳ / ಕಾಂಪ್ಯಾಕ್ಟರ್ ವಾಹನಗಳ ಲೋಪದೋಷಗಳಿಂದ ಅಪಘಾತ ಸಂಬಂಧಿಸಿದಲ್ಲಿ ಸಂಬಂಧಿಸಿದ ಗುತ್ತಿಗೆದಾರರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂದು ಬಿ.ಬಿ.ಎಂ.ಪಿ.,ವತಿಯಿಂದ ಸುತ್ತೋಲೆಯನ್ನು ಹೊರಡಿಸಲಾಗಿದೆ. ಸುತ್ತೋಲೆ ಪ್ರತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br><br>ಕಸದ ವಾಹನ / ಕಾಂಪ್ಯಾಕ್ಟರ್‌ಗಳ ವಾಹನ ಚಾಲಕರಿಗೆ ಪ್ರತ್ಯೇಕವಾದ ತರಬೇತಿಯನ್ನು ಪೊಲೀಸ್ ಇಲಾಖೆ ವತಿಯಿಂದ ನೀಡಲಾಗುತ್ತಿದೆ. |

**ಸಂಖ್ಯೆ: ನಅಇ 735 ಎಂಎನ್‌ವೈ 2022 (ಇ)**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಅನುಬಂಧ-1

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಶೇಷ ಆಯುಕ್ತರು(ಘನ)ರವರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು-೫೬೦೦೦೨.

No.: Spl.Comm(SWM)/PR/G-554/2022-23. ದಿನಾಂಕ: 20.07.2022

## :: ಸುತ್ತೋಲೆ ::

ವಿಷಯ: ಪಾಲಿಕೆಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ, ಸಾಗಾಣೆ ಮತ್ತು ವಿಲೇವಾರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಹನಗಳ ಮೇಲೆ ಬಿಬಿಎಂಪಿ ಎಂದು ನಾಮಫಲಕಗಳನ್ನು ನಿಷೇಧಿಸಿರುವ ಕುರಿತು.

ಉಲ್ಲೇಖ: 1. ವಿಶೇಷ ಆಯುಕ್ತರು(ಘನ)ರವರ ಸುತ್ತೋಲೆ ಸಂಖ್ಯೆ:ವಿ.ಆ(ಘನ)/ಪಿಆರ್/123/2022-23, ದಿನಾಂಕ: 14.05.2022.

2. ಮಾನ್ಯ ಮುಖ್ಯ ಆಯುಕ್ತರು, ಬಿಬಿಎಂಪಿರವರ ಮೌಖಿಕ ಆದೇಶ.

3. ವಿಶೇಷ ಆಯುಕ್ತರು(ಯೋಜನೆ)ರವರ ಸುತ್ತೋಲೆ ಸಂಖ್ಯೆ: ವಿ.ಆ(ಯೋ)/ಪಿಆರ್/722/2022-23, ದಿನಾಂಕ: 20.07.2022.

*************************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ, ಸಾಗಾಣೆ ಮತ್ತು ವಿಲೇವಾರಿಯಲ್ಲಿ ಗುತ್ತಿಗೆದಾರರ ಮೂಲಕ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವಾಹನಗಳ ಅಗತ್ಯ ತಪಾಸಣೆಯನ್ನು ಕೈಗೊಂಡು, ಸಾರಿಗೆ ಕಾಯ್ದೆಯನ್ವಯ ಅಗತ್ಯ ದಾಖಲಾತಿಗಳನ್ನು ಹೊಂದಿರುವ ಕುರಿತು ಧೃಡೀಕರಿಸಿಕೊಳ್ಳಲು ಮತ್ತು ಅನುಪಾಲನಾ ವರದಿಯನ್ನು ಸಲ್ಲಿಸಲು ಉಲ್ಲೇಖ(01)ರಂತೆ ಸೂಚಿಸಲಾಗಿತ್ತು.

ಪಾಲಿಕೆಯ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ, ಸಾಗಾಣೆ ಮತ್ತು ವಿಲೇವಾರಿಯಲ್ಲಿ ಗುತ್ತಿಗೆದಾರರ ಮೂಲಕ ಕಾರ್ಯನಿರ್ವಹಿಸುತ್ತಿರುವ ವಾಹನಗಳ ಮೇಲೆ ಗುತ್ತಿಗೆದಾರರು **"ಪಾಲಿಕೆಯ ಸೇವೆಯಲ್ಲಿ/ಬಿಬಿಎಂಪಿ/ಬಿಬಿಎಂಪಿ ಸೇವೆಯಲ್ಲಿ/ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ"** ಎಂದು ನಮೂದಿಸಿಕೊಂಡು/ನಾಮಫಲಕಗಳನ್ನು ಅನಧಿಕೃತವಾಗಿ ಹಾಕಿಕೊಂಡು ಕಾರ್ಯನಿರ್ವಹಿಸುತ್ತಿರುವುದು ಗಮನಿಸಲಾಗಿರುತ್ತದೆ. ಸದರಿ ವಾಹನಗಳ ಅಪಘಾತಗಳಾದಾಗ ಬಿಬಿಎಂಪಿಯ ಘನತ್ಯಾಜ್ಯದ ವಾಹನದ ಅಪಘಾತದಿಂದಾದ ಪರಿಣಾಮ ಎಂದು ದಿನಪತ್ರಿಕೆಗಳಲ್ಲಿ/ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿರುವುದರಿಂದ ನಗರದ ಸಾರ್ವಜನಿಕರಲ್ಲಿ ಪಾಲಿಕೆಯ ಕುರಿತು ತಪ್ಪು ಪರಿಕಲ್ಪನೆ ಮೂಡುತ್ತಿರುತ್ತದೆ.

ಮುಂದುವರೆದು, ಕೆಲವು ಅನಾಮಧೇಯ ವ್ಯಕ್ತಿಗಳು ಸಹ ತಮ್ಮ ವಾಹನಗಳ ಮೇಲೆ **"ಪಾಲಿಕೆಯ ಸೇವೆಯಲ್ಲಿ/ಬಿಬಿಎಂಪಿ/ಬಿಬಿಎಂಪಿ ಸೇವೆಯಲ್ಲಿ/ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ"** ಎಂದು ಅನಾಮಧೇಯ/ಅನಧಿಕೃತವಾಗಿ ನಮೂದು ಮಾಡುತ್ತಿರುವುದು/[illegible] ಹಾಕಿಕೊಳ್ಳುತ್ತಿರುವುದು ಉಲ್ಲೇಖ(02)ರಂತೆ ಗಂಭೀರವಾಗಿ ಪರಿಗಣಿಸಲಾಗಿದ್ದು [illegible]

ಅನಧಿಕೃತ ಅನಾಮಧೇಯ ವ್ಯಕ್ತಿಗಳಿಂದ ಪಾಲಿಕೆಯ ಘನತೆ ಮತ್ತು ಗೌರವಕ್ಕೆ ಧಕ್ಕೆಯುಂಟಾಗುತ್ತಿರುತ್ತದೆ.

ಈ ಹಿನ್ನಲೆಯಲ್ಲಿ, ಘನತ್ಯಾಜ್ಯ ನಿರ್ವಹಣಾ ಕೋಶದ ಎಲ್ಲಾ ಅಧಿಕಾರಿಗಳು ಈ ಕೆಳಗಿನ ಅಂಶಗಳನ್ನು ಪಾಲಿಸುವಂತೆ ಮತ್ತು ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಈ ಮೂಲಕ ಆದೇಶಿಸಿದೆ.

1. ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ಕೋಶದ ಗುತ್ತಿಗೆದಾರರ ಮೂಲಕ ಸರಬರಾಜು ಮಾಡಲಾದ ಎಲ್ಲಾ ಆಟೋಟಿಪ್ಪರಗಳ/ಕಾಂಪ್ಯಾಕ್ಟರ್‌ಗಳ ಕಾರ್ಯಾಚರಣೆಯ ಉಗಮ ಸ್ಥಳಗಳಲ್ಲಿ, **"ಪಾಲಿಕೆಯ ಸೇವೆಯಲ್ಲಿ/ಬಿಬಿಎಂಪಿ/ಬಿಬಿಎಂಪಿ ಸೇವೆಯಲ್ಲಿ/ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಇತರೆ"** ಎಂದು ನಮೂದಿಸುವುದು ತಕ್ಷಣದಿಂದ ನಿಷೇಧಿಸಲಾಗಿದ್ದು, ಕೂಡಲೇ ಅಂತಹ ನಾಮಫಲಕ/ನಮೂದುಗಳನ್ನು ತೆಗೆಸಲು ಸಹಾಯಕ ಕಾರ್ಯಪಾಲಕ ಅಭಿಯಂತರರು(ಘನಿ) ಗುತ್ತಿಗೆದಾರರಿಗೆ ನೋಟಿಸ್ ನೀಡುವುದು. ಸದರಿ ನೋಟಿಸ್‌ನಂತೆ ಕ್ರಮವಹಿಸದಿದ್ದಲ್ಲಿ, ಅಂತಹ ಗುತ್ತಿಗೆದಾರರ ವಿರುದ್ಧ ಕ್ರಮಕೈಗೊಳ್ಳುವುದು.

2. ಪಾಲಿಕೆಗೆ ಸಂಬಂಧಿಸಿರದ ಅನಾಮಧೇಯ ವಾಹನಗಳು **"ಪಾಲಿಕೆಯ ಸೇವೆಯಲ್ಲಿ/ಬಿಬಿಎಂಪಿ/ಬಿಬಿಎಂಪಿ ಸೇವೆಯಲ್ಲಿ/ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಇತರೆ"** ಎಂದು ನಾಮಫಲಕ ಹಾಕಿದ್ದಲ್ಲಿ/ನಮೂದಿಸಿದ್ದಲ್ಲಿ ಅಂತಹ ವಾಹನಗಳ ಚಾಲಕರ ಮೇಲೆ ಮತ್ತು ಮಾಲೀಕರ ಮೇಲೆ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸುವುದು.

3. ಎಲ್ಲಾ ಚಾಲಕರ ವಾಹನ ಚಾಲನಾ ಪರವಾನಿಗೆ, ವಾಹನ ಚಲಿಸಲು ದೈಹಿಕ ಸಧೃಡತೆಯ ಪ್ರಮಾಣ ಪತ್ರ, ವಾಹನದ ಫೀಟನೆಸ್ ಪ್ರಮಾಣ ಪತ್ರ, ಇನ್ಸುರೆನ್ಸ್ ಪ್ರಮಾಣ ಪತ್ರಗಳ ತಪಾಸಣೆ ಹಾಗೂ ಅವಶ್ಯ ಕಾಯ್ದೆಗಳನ್ವಯ ಇತರೆ ತಪಾಸಣೆಗಳನ್ನು ಸಹ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು(ಘನಿ)/ಕಿರಿಯ ಆರೋಗ್ಯ ಪರಿವೀಕ್ಷಕರುಗಳು ಕೈಗೊಳ್ಳುವುದು.

4. ವಲಯ ಮತ್ತು ವಾರ್ಡ ಮಾರ್ಷಲ್‌ಗಳು/ಕಿರಿಯ ಆರೋಗ್ಯ ಪರಿವೀಕ್ಷಕರುಗಳು ಆಟೋಟಿಪ್ಪರಗಳ/ ಕಾಂಪ್ಯಾಕ್ಟರ್‌ಗಳ ಕಾರ್ಯಾಚರಣೆಯ ರಸ್ತೆಗಳಲ್ಲಿ ಇಂತಹ ಅನಧಿಕೃತವಾಗಿ ಪಾಲಿಕೆಯ ಹೆಸರನ್ನು ನಮೂದಿಸಿರುವ/ನಾಮಫಲಕಗಳನ್ನು ಹಾಕಿಕೊಂಡಿರುವ ವಾಹನಗಳನ್ನು ನಿಲ್ಲಿಸಿ, ಕೂಡಲೇ ತೆಗೆಸಲು ಸೂಚಿಸಿ ಖಚಿತಪಡಿಸಿಕೊಳ್ಳುವುದು.

5. ಒಂದು ವೇಳೆ ಗುತ್ತಿಗೆದಾರರಿಗೆ ಪಾಲಿಕೆಯ ಹೆಸರು ನಮೂದು/ನಾಮಫಲಕಗಳಿಲ್ಲದೇ ಘನತ್ಯಾಜ್ಯ ಸಂಗ್ರಹಣೆ, ಸಾಗಾಣೆ ಮತ್ತು ವಿಲೇವಾರಿಯಲ್ಲಿ ತೊಂದರೆಯಾಗುತ್ತಿದ್ದಲ್ಲಿ, ಮುಂಚಿತವಾಗಿಯೇ ಅಧೀಕ್ಷಕ ಅಭಿಯಂತರರಿಂದ ಲಿಖಿತ ರೂಪದಲ್ಲಿ ಮಾನ್ಯತೆಯ ಅವಧಿಯೊಂದಿಗೆ ಅನುಮತಿ ಪತ್ರವನ್ನು ಪಡೆದು ಘನತ್ಯಾಜ್ಯ ಸಂಗ್ರಹಣೆ, ಸಾಗಾಣೆಯ

ಕಾರ್ಯವನ್ನು ನಿರ್ವಹಿಸುವುದು. ಕಾರ್ಯಚರಣೆಯ ಸಮಯದಲ್ಲಿ ಪೋಲಿಸ್/ಇತರ ಅಧಿಕಾರಿಗಳು ಕೇಳಿದ್ದಲ್ಲಿ, ಸದರಿ ಪತ್ರವನ್ನು ಸಲ್ಲಿಸುವುದು.

6. ಇನ್ನು ಮುಂದೆ, ಅನಧಿಕೃತವಾಗಿ ಗುತ್ತಿಗೆದಾರರ ವಾಹನಗಳ ಮೇಲೆ **"ಪಾಲಿಕೆಯ ಸೇವೆಯಲ್ಲಿ/ಬಿಬಿಎಂಪಿ/ಬಿಬಿಎಂಪಿ ಸೇವೆಯಲ್ಲಿ/ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ಇತರೆ"** ನಮೂದಿಸಿ/ನಾಮಫಲಕ ಅಳವಡಿಸಿರುವುದು ಪಾಲಿಕೆಯ /ಪೋಲಿಸ್ ಇಲಾಖೆಯ/ಇತರೆ ಅಧಿಕಾರಿಗಳ ಗಮನಕ್ಕೆ ಬಂದರೆ, ಅಂತಹ ವಾಹನಗಳ ಚಾಲಕರ ಮೇಲೆ ಮತ್ತು ಮಾಲೀಕರ ಮೇಲೆ ಕಾನೂನಾತ್ಮಕವಾಗಿ ಕ್ರಮಜರುಗಿಸುವುದು.

7. ಒಂದು ವೇಳೆ, ಮೇಲೆ ತಿಳಿಸಿದ ಅನಧಿಕೃತ/ಅನಾಮಧೇಯ ವಾಹನಗಳ ಅಪಘಾತಗಳಿಂದಾಗಿ ಸಾರ್ವಜನಿಕರಿಗೆ ತೊಂದರೆ ಉಂಟಾದ್ದಲ್ಲಿ ಅಥವಾ ಸಾವು-ನೋವು ಸಂಭವಿಸಿದಲ್ಲಿ ಸದರಿ ವಾಹನಗಳ ಮಾಲೀಕರಿಂದಲೇ ಪರಿಹಾರದ ಮೊತ್ತವನ್ನು ದಂಡದ ರೂಪದಲ್ಲಿ ಸಂತ್ರಸ್ತರಿಗೆ ಕೊಡಿಸಲಾಗುವುದೆಂದು ಈ ಮೂಲಕ ಸೂಚಿಸಿದೆ.

ಈ ಮೇಲೆ ತಿಳಿಸಿದಂತೆ ಅಧೀಕ್ಷಕ ಅಭಿಯಂತರರು/ಸಹಾಯಕ ಕಾರ್ಯಪಾಲಕ ಅಭಿಯಂತರರು(ಘನಿ)/ಕಿರಿಯ ಆರೋಗ್ಯ ಪರಿವೀಕ್ಷಕರು/ಮಾರ್ಷಲ್ಸ್ ರವರುಗಳು ಅಗತ್ಯ ಕ್ರಮವಹಿಸುವುದು.

ವಿಶೇಷ ಆಯುಕ್ತರು(ಘನಿ)
ಬೃಹತ್ ಬೆಂಗಳೂರು ಮಹಾನಗರಪಾಲಿಕೆ

ಪ್ರತಿಯನ್ನು:

1. ಮಾನ್ಯ ಆಡಳಿತಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಮಾಹಿತಿಗಾಗಿ.
2. ಮಾನ್ಯ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಮಾಹಿತಿಗಾಗಿ.
3. ವಿಶೇಷ ಆಯುಕ್ತರು(ಹಣಕಾಸು), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಮಾಹಿತಿಗಾಗಿ.
4. ವಿಶೇಷ ಆಯುಕ್ತರು(ಆಡಳಿತ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಮಾಹಿತಿಗಾಗಿ.
5. ವಿಶೇಷ ಆಯುಕ್ತರು(ಕಲ್ಯಾಣ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಮಾಹಿತಿಗಾಗಿ.
6. ವಿಶೇಷ ಆಯುಕ್ತರು(ಆರೋಗ್ಯ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಮಾಹಿತಿಗಾಗಿ.
7. ವಿಶೇಷ ಆಯುಕ್ತರು(ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಮಾಹಿತಿಗಾಗಿ.
8. ಜಂಟಿ ಆಯುಕ್ತರು, ಎಲ್ಲಾ ವಲಯಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಅಗತ್ಯ ಕ್ರಮಕ್ಕಾಗಿ.

9. ಅಧೀಕ್ಷಕ ಅಭಿಯಂತರರು, ಎಲ್ಲಾ ವಲಯಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಅಗತ್ಯ ಕ್ರಮಕ್ಕಾಗಿ.
10. ಸ.ಕಾ.ಅ(ಘನಿ), ಎಲ್ಲಾ ವಿಭಾಗಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಅಗತ್ಯ ಕ್ರಮಕ್ಕಾಗಿ.
11. ಮುಖ್ಯ ಮಾರ್ಷಲ್ ಅಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಅಗತ್ಯ ಕ್ರಮಕ್ಕಾಗಿ.
12. ಕಿರಿಯ ಆರೋಗ್ಯ ಪರಿವೀಕ್ಷಕರು, ಎಲ್ಲಾ ವಾರ್ಡ್‌ಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರುರವರ ಅಗತ್ಯ ಕ್ರಮಕ್ಕಾಗಿ.
13. ಕಛೇರಿ ಪ್ರತಿ.